# 'ಅಣ್ಣಾ'ವ್ರ ಶಕ್ತಿ



'ಪ್ರಜಾಪ್ರಭುತ್ವವಾದಿ ದೇಶದಲ್ಲಿ ಒಬ್ಬ ಸಾಮಾನ್ಯ ವ್ಯಕ್ತಿಯೂ ಕೂಡಾ ದೈತ್ಯ ಸರಕಾರವನ್ನು ಮಣಿಸಬಹುದು' ಎನ್ನುವುದಕ್ಕೆ ದೊಡ್ಡ ಉದಾಹರಣೆ ಅಣ್ಣಾ ಹಜಾರೆ. ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ 'ಅಣ್ಣಾ'ವ್ರ ಹೋರಾಟ ಇಡೀ ಭಾರತದ ಯುವಜನತೆಯನ್ನು ಹೊಸ ದಿಕ್ಕಿನತ್ತ ಕೊಂಡೊಯ್ದಿದೆ. ದೇಶದೆಲ್ಲೆಡೆ 'ಅಣ್ಣಾ ಅಲೆ' ಎದ್ದಿದೆ. ಇದನ್ನು ಬರೆಯುವ ವೇಳೆಗೆ, ಉಪವಾಸ ಕುಳಿತಿರುವ 71ರ ಇಳಿವಯಸ್ಸಿನ ಅಣ್ಣಾ ಹಜಾರೆಯವರ ಬಳಿಗೆ ರಾಜಿಗೆ ಕೇಂದ್ರ ಸರಕಾರವೇ ಬಂದು ಕುಳಿತಿದೆ.

ಅಣ್ಣಾ ಹಜಾರೆಯವರದ್ದು (ಬರ್ತ್‌ಡೇ 15-1-1940) ಶುದ್ಧ ನೈತಿಕ ಶಕ್ತಿ. ಆ ನೈತಿಕ ಶಕ್ತಿ ಏಕಾಏಕಿ ಗಳಿಸಿದ್ದಲ್ಲ. ಸನ್ನಡತೆ ಮತ್ತು ಪ್ರಾಮಾಣಿಕತೆಯಿಂದ ಜೀವನವಿಡೀ ದುಡಿದು ಗಳಿಸಿದ್ದು. ಅಹ್ಮದ್‌ನಗರದ ಭಿಂಗಾರ್ ಎಂಬ ಹಳ್ಳಿಯಲ್ಲಿ ಜನಿಸಿದ ಅಣ್ಣಾ ಅವರ ತಂದೆ-ತಾಯಿ ಕೃಷಿ ಕೂಲಿ ಕಾರ್ಮಿಕರು. ಸಾಲ- ಸೋಲಕ್ಕೆ ಸಿಕ್ಕು ಇದ್ದ 5 ಎಕರೆ ಬರಡು ಜಮೀನನ್ನು ಮಾರಿ ರಾಲೆಗಾನ್ ಸಿದ್ಧಿ ಗ್ರಾಮಕ್ಕೆ ವಲಸೆ ಬಂದರು. ಎಳೆಯ ಅಣ್ಣಾ ದೂರದ ಮುಂಬೈನಲ್ಲಿ ಇದ್ದ ಚಿಕ್ಕಮ್ಮನ ಜತೆಗೆ ಬಂದು ವಾಸಿಸಿದರು. ಬಡತನದಿಂದಾಗಿ 7ನೆ ತರಗತಿಗೇ ಶಾಲೆಗೆ ಸಲಾಂ ಹೇಳಿದರು.

ದುಡಿಮೆ ಹುಡುಕಿಕೊಂಡು ಯುವಕ ಅಣ್ಣಾ ಹೊರಟದ್ದು ಭಾರತೀಯ ಸೇನೆಗೆ. ಅಲ್ಲಿ ಡ್ರೈವರ್ ಕೆಲಸ. 65ರ ಭಾರತ- ಪಾಕ್ ಯುದ್ಧದಲ್ಲಿ ಗಡಿಯಲ್ಲಿ ನಡೆದ ದಾಳಿಯೊಂದರಲ್ಲಿ ಟ್ರಕ್ ಚಾಲಕ ಅಣ್ಣಾ ಒಬ್ಬನೇ ಬದುಕುಳಿದ! 70ರಲ್ಲಿ ನಡೆದ ರಸ್ತೆ ಅಪಘಾತವೊಂದರಲ್ಲೂ ಡ್ರೈವರ್ ಅಣ್ಣಾ ಸ್ವಲ್ಪದರಲ್ಲೇ ಬಚಾವಾಗಿದ್ದರು.

ಸೇನೆಯ ಕೆಲಸ ಬಿಟ್ಟು ಊರಿಗೆ ಬಂದ ಅಣ್ಣಾ ಕುಡಿತ, ಜೂಜು, ಅನಕ್ಷರತೆ ಮುಂತಾದ ಸಾಮಾಜಿಕ ಕೆಡುಕುಗಳ ವಿರುದ್ಧ ಹೋರಾಟ ರೂಪಿಸಿದರು. ರಾಲೆಗಾನ್ ಸಿದ್ಧಿ ಅದ್ಭುತ ಸ್ವಯಂಸಂಪೂರ್ಣ ಹಳ್ಳಿಯಾಗಿ ರೂಪುಗೊಂಡಿತು. ಜಲಸಂವರ್ಧನೆ, ಭ್ರಷ್ಟಾಚಾರದ ವಿರುದ್ಧ ಸಾತ್ವಿಕ ಹೋರಾಟ ಅಣ್ಣಾರನ್ನು ಜನನಾಯಕರನ್ನಾಗಿಸಿತು. 98ರಲ್ಲಿ ಮಹಾರಾಷ್ಟ್ರದ ಬಿಜೆಪಿ-ಶಿವಸೇನೆ ಸರಕಾರದ ಭ್ರಷ್ಟ ಸಚಿವ ಬಾಬುರಾವ್ ಗೋಲಪ್ ಅಕ್ರಮ ಆಸ್ತಿಯ ವಿರುದ್ಧ ಅಣ್ಣಾ ನಡೆಸಿದ ಹೋರಾಟ ಅಪರೂಪದ್ದು. 'ಸಿನಿಮಾ ಬ್ಲ್ಯಾಕ್‌ಟಿಕೆಟ್ ಮಾರುತ್ತಿದ್ದ ಗೋಲಪ್, ಸಚಿವರಾದ ಬಳಿಕ 6 ಕೋಟಿ ರೂಪಾಯಿ ಆಸ್ತಿ ಮಾಡಿದ್ದರ ಬಗ್ಗೆ ರಾಜ್ಯಪಾಲರಿಗೆ ದಾಖಲೆ ಸಹಿತ ದೂರು ನೀಡಿದ ಅಣ್ಣಾ ವಿರುದ್ಧ ಸಚಿವರು ಮಾನನಷ್ಟ ಮೊಕದ್ದಮೆ ಹೂಡಿದರು. ಸರಕಾರ ಅಣ್ಣಾರನ್ನು ಬಂಧಿಸಿತು! ಆದರೆ ಜನರ ಹೋರಾಟಕ್ಕೆ ಮಣಿದು ಬಿಡುಗಡೆಗೊಳಿಸಿತು.

ಹಳ್ಳಿ ಹಳ್ಳಿಗಳಲ್ಲಿ ಇವತ್ತು ಸಾಮಾನ್ಯರನ್ನು ಭ್ರಷ್ಟಾಚಾರದ ವಿರುದ್ಧ ಹೋರಾಡಲು ಪ್ರೇರೇಪಿಸುತ್ತಿರುವ ಮಾಹಿತಿ ಹಕ್ಕು ಕಾಯ್ದೆ ಅಣ್ಣಾ ಹೋರಾಟದ ಕೊಡುಗೆ. ಈಗ ಭ್ರಷ್ಟರನ್ನು ಮಟ್ಟ ಹಾಕಲು 'ಜನ ಲೋಕಪಾಲ ಮಸೂದೆ' ಜಾರಿಗೆ ಅಣ್ಣಾ ನಡೆಸಿರುವ ಹೋರಾಟ ನಿಜಕ್ಕೂ ಐತಿಹಾಸಿಕ. ■

# ಬಡ ಮುಖ್ಯಮಂತ್ರಿ!




ಮುಖ್ಯಮಂತ್ರಿ ಯಾವ ರಾಜ್ಯದವರೇ ಆಗಿರಲಿ; ಭೂಹಗರಣ ಮತ್ತು ಅಕ್ರಮ ಆಸ್ತಿ ಸಂಪಾದನೆಯ ಆರೋಪ ಅವರ ಬೆನ್ನು ಬಿಟ್ಟಿಲ್ಲ. ಚುನಾವಣೆಗೆ ನಿಲ್ಲುವಾಗ ಅವರ ಘೋಷಿತ ಆಸ್ತಿಯ ಮೊತ್ತ ಕೋಟ್ಯಂತರ ರೂಪಾಯಿ! ಘೋಷಣೆ ಮಾಡದ ಬೇನಾಮಿ ಆಸ್ತಿಯೂ ಕೋಟಿಗಟ್ಟಳೆಯಲ್ಲೇ.

ಆದರೆ ಇಲ್ಲೊಬ್ಬ ಬಡ ಮುಖ್ಯಮಂತ್ರಿ ಇದ್ದಾರೆ. ಅವರ ಹೆಸರು ಬುದ್ಧದೇಬ್ ಭಟ್ಟಾಚಾರ್ಜಿ. (ಬರ್ತ್‌ಡೇ 1-3-44) ಕಳೆದ 10 ವರ್ಷಗಳಿಂದ ಅವರೇ ಮುಖ್ಯಮಂತ್ರಿ. ಈ ಸಲ ಅವರು ಜಾಧವ್‌ಪುರ ಕ್ಷೇತ್ರದಿಂದ ಅಸೆಂಬ್ಲಿ ಚುನಾವಣೆಗೆ ನಿಂತಿದ್ದಾರೆ. ಚುನಾವಣಾಧಿಕಾರಿಗೆ ಅವರು ಘೋಷಿಸಿರುವ ಆಸ್ತಿ ವಿವರ ಹೀಗಿದೆ: ಸ್ವಂತ ಮನೆ- ಇಲ್ಲ! ಕಾರು- ಇಲ್ಲ! ಕೃಷಿ ಭೂಮಿ-ಇಲ್ಲ! ಕೃಷಿಯೇತರ ಭೂಮಿ- ಇಲ್ಲ! ವಾಣಿಜ್ಯ ಕಟ್ಟಡ-ಇಲ್ಲ! ಪಿತ್ರಾರ್ಜಿತ ಆಸ್ತಿ- ಇಲ್ಲ! ಒಡವೆ- ಇಲ್ಲ! ಬ್ಯಾಂಕ್ ಠೇವಣಿ- ಇಲ್ಲ! ಹೂಡಿಕೆ-ಇಲ್ಲ! ಇಡೀ ವರ್ಷದ ಆದಾಯ ಒಂದು ಲಕ್ಷ ರೂಪಾಯಿ! ತಿಂಗಳ ಸಂಬಳ ಸರಕಾರದಿಂದ ಬಂದದ್ದನ್ನು ಅವರು ಪಕ್ಷಕ್ಕೆ ನೀಡುತ್ತಾರೆ. ಅದರಿಂದ ಪಕ್ಷ, ಕೇವಲ 8 ಸಾವಿರ ರೂಪಾಯಿಯನ್ನು ಅವರಿಗೆ ನೀಡುತ್ತದೆ!

ಹಾಗಿದ್ದರೆ ಇನ್ನೇನಿದೆ.. ಎಂದು ಕೇಳಬೇಡಿ. ಅವರ ಬಳಿ 5 ಸಾವಿರ ರೂಪಾಯಿ ನಗದು ಇದೆ. ಅವರು ವಾಸಿಸುತ್ತಿರುವುದು ಸರಕಾರದ ಬಾಡಿಗೆ ಮನೆಯಲ್ಲಿ. ಅಂದ ಹಾಗೆ ಬುದ್ಧದೇಬ್ ಮಡದಿಯ ಬಳಿ 15 ಲಕ್ಷದ ಮನೆ ಮತ್ತು 31 ಲಕ್ಷ ಮೌಲ್ಯದ ಒಡವೆ, ಬ್ಯಾಂಕ್ ಠೇವಣಿ ಇದೆ. ಅವರು ಖಾಸಗಿ ಸಂಸ್ಥೆಯಲ್ಲಿ ಉದ್ಯೋಗಿಯಾಗಿ ನಿವೃತ್ತರು. ಈಗ ಅಲ್ಲೇ ಸಲಹೆಗಾರ್ತಿಯಾಗಿದ್ದಾರೆ.

2-3 ವರ್ಷ ಆಳಿರುವ ಉಳಿದ ಮುಖ್ಯಮಂತ್ರಿಗಳೆಲ್ಲ ಈ ಪಟ್ಟಿ ನೋಡಿ ಮುಸಿ ಮುಸಿ ನಗಬಹುದೆ? ■

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65